ನೇಮಿಸಿಕೊಂಡಿದ್ದೇವೆ. ಗ್ರಾಮ ಸಹಾಯಕರುಗಳು ನಮ್ಮನ್ನು 'ಡಿ' ಗ್ರೂಪ್‌ಗೆ ಸೇರಿಸಿ ಅವರಿಗೆ ಏನೇನು ಅನುಕೂಲಗಳಿವೆ ಅವುಗಳನ್ನು ನಮಗೂ ಕೊಡಬೇಕೆಂದು ಮನವಿ ಮಾಡಿಕೊಂಡಿದ್ದಾರೆ ಹಣಕಾರಿನ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ಪರಿಶೀಲನೆ ಮಾಡುತ್ತದೆ.

ಶ್ರೀ ಬಿ. ಬಸವಲಿಂಗಪ್ಪ —ತೋಟಿ ತಳವಾರರುಗಳಿಗೆ ನಾವು ಇದ್ದಾಗಲೇ ಸಂಬಳವನ್ನು ನಿಗದಿ ಮಾಡಿದ್ದೇವೆ. ಪಟೇಲರು ಮತ್ತು ಶ್ಯಾನುಭೋಗರು ಏನಿದ್ದಾರೆ ಅವರುಗಳಿಗೆ ಏನು ಸಂಬಳ ಕೊಡುತ್ತೀರಿ ?

ಶ್ರೀ ಎಸ್.ಆರ್. ಬೊಮ್ಮಾಯಿ —ಪಟೇಲ್ ಶ್ಯಾನುಭೋಗರುಗಳಿಗೆ ಸಂಬಳ ಕೊಡುತ್ತಿಲ್ಲ ಪೆನ್‌ಷನ್ ಕೊಡುತ್ತಿದ್ದೇವೆ.

ಶ್ರೀ ಬಿ. ಬಸಲಿಂಗಪ್ಪ.—ಅವರಿಗೆ ಸಂಬಳ, ಇವರಿಗೆ ಪೆನ್‌ಷನ್ ಇಬ್ಬರಿಗೂ ಎಷ್ಟು ಅಂತರವಿದೆ ?

ಶ್ರೀ ಎಸ್.ಆರ್. ಬೊಮ್ಮಾಯಿ.—ತೋಟಿ ತಳವಾರರಿಗೆ ತಿಂಗಳಿಗೆ ೧೨೫ ರೂಪಾಯಿ ಕೊಡಲಾಗುತ್ತಿದೆ. ಪಟೇಲ್ ಶ್ಯಾನುಭೋಗರುಗಳಿಗೆ ೬೦೦ ರೂಪಾಯಿ ಕೊಡಲಾಗುತ್ತಿದೆ. ವಾರ್ಷಿಕ ಆದಾಯ ೪೫೦೦ ರೂಪಾಯಿಗಳಿಗಿಂತ ಕಡಿಮೆ ಇರುವವರಿಗೆ ಕೊಡಲಾಗುತ್ತಿದೆ ಗ್ರಾಮ ಸಹಾಯಕರ ಮನವಿಯನ್ನು ಸರ್ಕಾರ ಪರಿಶೀಲನೆ ಮಾಡುತ್ತದೆ.

ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲ್ಲೂಕಿನ (ಪಾಳ್ಯ) ಉಪ ಗ್ರಾಮಗಳಿಗೆ ವಿದ್ಯುತ್ ಒದಗಿಸುವ ಬಗ್ಗೆ

೧೨೫೦ ಶ್ರೀ ಕೆ.ವಿ. ರವೀಂದ್ರನಾಥ ಬಾಬು (ಕೊಟ್ಟೂರು).- ಮಾನ್ಯ ವಿದ್ಯುತ್ ಗಣಿ ಭೂ ವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೂಡ್ಲಿಗಿ ತಾಲ್ಲೂಕಿನಲ್ಲಿರುವ ಪಾಳ್ಯಗಳಿಗೆ ಗ್ರಾಮೀಣ ವಿದ್ಯುದ್ದೀಕರಣ ಕಾರ್ಯಕ್ರಮದ ಅಡಿಯಲ್ಲಿ ವಿದ್ಯುತ್ ಸರಬರಾಜು ಮಾಡಲು ಸೇರಿರುವುದು ಮತ್ತು ಕಾರ್ಯಾದೇಶ ಮಂಜೂರಾಗಿರುವುದೂ ಸರ್ಕಾರಕ್ಕೆ ತಿಳಿದಿದೆಯೇ ?

ಆ) ಇಲ್ಲಿಯವರೆವಿಗೆ ಈ ಕಾರ್ಯವನ್ನು ಕೈಗೊಳ್ಳದಿರುವ ವಿಚಾರ ಸರ್ಕಾರಕ್ಕೂ ತಿಳಿದಿದೆಯೆ ?

ಇ) ಜಾಗೃತೆಯಾಗಿ ಈ ಕಾರ್ಯಗಳನ್ನು ಕೈಗೊಳ್ಳಲು ಸರ್ಕಾರವು ಸೂಚನೆ ನೀಡುವುದೆ ?

ಶ್ರೀ ಜೆ.ಎಸ್. ದೇಶಮುಖ್ (ವಿದ್ಯುತ್, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು) —

ಅ) ಮತ್ತು ಆ)ಕೂಡ್ಲಿಗಿ ತಾಲೂಕಿನ ೯ ಪಾಳ್ಯಗಳಿಗೆ ವಿದ್ಯುದ್ದೀಕರಣವನ್ನು ಮಾಡಲು ಮಂಜೂರಾತಿ ಕೊಟ್ಟಿತ್ತು. ಅವುಗಳಲ್ಲಿ ೪ ಪಾಳ್ಯಗಳ ವಿದ್ಯುದ್ದೀಕರಣವನ್ನು ಅಕ್ಟೋಬರ್ ೮೫ರ ವೇಳೆಗೆ ಮುಗಿಸಲಾಯಿತು. ಅನುದಾನದ ಕೊರತೆಯ ಕಾರಣದಿಂದ ಉಳಿದ ೫ ಪಾಳ್ಯಗಳ ವಿದ್ಯುದ್ದೀಕರಣವನ್ನು ಕೈಗೆದುಕೊಳ್ಳಲಾಗಲಿಲ್ಲ.

ಇ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ಈ ಕಾರ್ಯವನ್ನು ಜಾಗ್ರತೆಯಾಗಿ ತೆಗೆದುಕೊಳ್ಳಲು ಸೂಚನೆ ನೀಡಲಾಗುವುದು.

ಶ್ರೀ ಕೆ.ವಿ. ರವೀಂದ್ರನಾಥಬಾಬು —ಹ್ಯಾಮ್ಲೆಟ್ ಹಳ್ಳಿಗಳಿಗೆ ವಿದ್ಯುತ್ ಕನೆಕ್ಷನ್ ಕೊಡುತ್ತಿಲ್ಲ ಕೂಡ್ಲಿಗಿ ತಾಲ್ಲೂಕಿನಲ್ಲಿ ಬರಗಾಲದ ತೊಂದರೆಯಿದೆ. ಶೇವಿನ್ನೂ ವಿಲೇಜ್‌ಗಳಲ್ಲಿ ವಿದ್ಯುತ್ ಸರಬರಾಜು ಸೆಂಟ್ ಪರ್ಸೆಂಟ್ ಕವರ್ ಮಾಡುತ್ತಾರೆ. ಶೇವಿನ್ನೂ ವಿಲೇಜ್‌ಗಳಿಗಿಂತ ಹ್ಯಾಮ್ಲೆಟ್‌ಗಳು ಹೆಚ್ಚಿಗೆ ಬಿಲ್ಡಪ್ ಆಗಿರುವುದರಿಂದ ಪವರ್ ಕನೆಕ್ಷನ್ ಕೊಡುವುದು ಬಹಳ ಅಗತ್ಯವಾಗಿದೆ. ನಾನು ನನ್ನ ಪ್ರಶ್ನೆಯಲ್ಲಿ ಎಲ್ಲಾ ಹಳ್ಳಿಗಳನ್ನೂ ಕವರ್ ಮಾಡಲಾಗುವುದೇ ಎಂದು ಕೇಳಿದ್ದಕ್ಕೆ ಸರಿಯಾದ ಉತ್ತರ ಬಂದಿಲ್ಲ.

ಅಧ್ಯಕ್ಷರು.—ಮಾನ್ಯಸದಸ್ಯರ ಸಲಹೆಗಳನ್ನು ಗಮನಿಸಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆಂದು ಹೇಳಿ.

ಶ್ರೀ ಜಿ.ಎಸ್. ದೇಶಮುಖ್. ಕೂಡ್ಲಿಗಿ ತಾಲ್ಲೂಕಿನ ಎಲ್ಲಾ ಹಳ್ಳಿಗಳಿಗೂ ವಿದ್ಯುತ್ ಅನ್ನು ಒದಗಿಸಲು ಸರ್ಕಾರ ಕಾರ್ಯಕ್ರಮವನ್ನು ಹಾಕಿಕೊಂಡಿದೆ. ಹಂತ ಹಂತವಾಗಿ ಕೆಲಸವನ್ನು ಮಾಡಲಾಗುತ್ತಿದೆ. ಬರುವ ಜೂನ್ ತಿಂಗಳ ಕೊನೆಯೊಳಗೆ ಎಲ್ಲಾ ಹಳ್ಳಿಗಳಿಗೂ ವಿದ್ಯುತ್ ಅನ್ನು ಒದಗಿಸುವ ವಿಷಯವಾಗಿ ಮಾಡಲಾಗುವುದು.

ಶ್ರೀ ಕೆ.ವಿ. ರವೀಂದ್ರನಾಥಬಾಬು.—ಕೆಲಸವನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ?

ಶ್ರೀ ಜೆ.ಎಸ್ ದೇಶಮುಖ್.—ಕೆಲಸವನ್ನು ಮಾಡಿ ಜೂನ್ ಕೊನೆಯೊಳಗೆ ಮುಗಿಸುತ್ತೇವೆ.

ತುಂಡು ಭೂಮಿ ನಿರೋಧ ಮತ್ತು ಕ್ರೋಡೀಕರಣ,

೧೬೪೦. ಶ್ರೀ ಡಿ. ಎ. ಚಿನ್ನಪ್ಪ (ಮಡಿಕೇರಿ).—ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳು ಕರ್ನಾಟಕ ತುಂಡು ಭೂಮಿ ನಿರೋಧ ಮತ್ತು ಕ್ರೋಡೀಕರಣ ಕಾಯ್ದಿಯಿಂದ ವಿನಾಯಿತಿ ಪಡೆದಿದೆಯೇ ?

ಆ) ಹಾಗಿದ್ದಲ್ಲಿ ಕೊಡಗು ಜಿಲ್ಲೆಯು ಮಲೆನಾಡು ಪ್ರದೇಶದಲ್ಲಿರುವುದರಿಂದ ಆ ಜಿಲ್ಲೆಗೆ ಅದೇ ರೀತಿ ವಿನಾಯಿತಿ ಕೊಡದಿರಲು ಕಾರಣವೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಮಾನ್ಯ ಕಂದಾಯ ಸಚಿವರು).—

ಅ) ಹೌದು.

ಆ) ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಭೂ ಹಿಡುವಳಿಗಳು ಕರ್ನಾಟಕ ತುಂಡು ಭೂಮಿ ನಿಷೇದ ಮತ್ತು ಕ್ರೋಡೀಕರಣ ಕಾಯಿದೆಯಲ್ಲಿ ಅಳವಡಿಸಿರುವ ನಿರ್ದಿಷ್ಟ ಪ್ರಮಾಣದ ಭೂಮಿಗಿಂತಲೂ ಚಿಕ್ಕದಾಗಿರುವುದರಿಂದಲೂ ಮತ್ತು ಆ ಜಿಲ್ಲೆಗಳ ಒಂದು ವಿಶೇಷ ರೀತಿಯ ಭೌಗೋಳಿಕ ಪ್ರಾಕೃತಿಕ ಸ್ವರೂಪವನ್ನು ಪರಿಗಣಿಸಿ ಈ ಅಧಿನಿಯಮದ ೨ನೇ ಅಧ್ಯಾಯವನ್ನು ಈ ಜಿಲ್ಲೆಗಳಿಗೆ ಅನ್ವಯಿಸದೆ ಇರುವಂತೆ ಆದೇಶ ಹೊರಡಿಸಲಾಗಿದೆ. ಆದರೆ ಇಂತಹ ಪರಿಸ್ಥಿತಿಯು ಕೊಡಗು ಜಿಲ್ಲೆಗೆ ಉದ್ಭವಿಸುವುದಿಲ್ಲ, ಆದರೂ ಇಂಥಹ ವಿನಾಯಿತಿಯನ್ನು ರಾಜ್ಯದ ಉಳಿದ ಎಲ್ಲಾ ಜಿಲ್ಲೆಗಳಿಗೂ ವಿಸ್ತರಿಸಲು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ತಜ್ಞರಿಂದ ವರದಿ ಬಂದ ನಂತರ ಪರಿಶೀಲಿಸಿ, ಕರ್ನಾಟಕ ತುಂಡು ಭೂಮಿ ನಿಷೇದ ಮತ್ತು ಕ್ರೋಡೀಕರಣ ಅಧಿನಿಯಮವನ್ನು ಉದ್ದೇಶಪೂರ್ವಕವಾಗಿ ಜಾರಿಗೆ ತರುವ ಮೂಲಕ ನಿರ್ದಿಷ್ಟ ಪ್ರಮಾಣದ ಭೂ ಹಿಡುವಳಿಯನ್ನು ಪುನರ್ ನಿಗದಿ ಪಡಿಸಲಾಗುವುದು.

ಶ್ರೀ ಡಿ. ಎ. ಚಿನ್ನಪ್ಪ.—ಭೌಗೋಳಿಕ ಪ್ರಾಕೃತಿಕ ಸ್ವರೂಪವನ್ನು ಪರಿಗಣಿಸಿ ಎಂದು ಹೇಳುತ್ತಿದ್ದಾರೆ. ಕೊಡಗು, ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳು ಮಲೆನಾಡು ವಿಲಿಯಾ. ಕೊಡಗಿನಲ್ಲಿ ಸಮುದ್ರವನ್ನು ಬಿಟ್ಟರೆ ಕೊಡಗಿನಲ್ಲಿ ಏನೂ ವ್ಯತ್ಯಾಸವಿಲ್ಲ. ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಕರ್ನಾಟಕ ತುಂಡು ಭೂಮಿ ನಿರೋಧ ಮತ್ತು ಕ್ರೋಡೀಕರಣ ಕಾಯ್ದೆಯಿಂದ ವಿನಾಯಿತಿ ಇರುವ ಹಾಗೆ ಮಾಡಿದರೆ ನಮ್ಮಲ್ಲಿನ ಜನರಿಗೆ ಅನುಕೂಲವಾಗುತ್ತದೆ. ಕೊಡಗು ಅಂದರೆ ಎಲ್ಲರೂ ಕೂಡ ಕಾಫಿ ಪ್ಲಾಂಟುಗಳನ್ನು ಹೊಂದಿರುವುದಿಲ್ಲ. ಶೇಕಡ ೭೦ ರಷ್ಟು ಕಾಫಿ ಪ್ಲಾಂಟರುಗಳು ಇರಬಹುದು. ಬೇರೆಯವರ ಪರಿಸ್ಥಿತಿ ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿರುವಂತೆಯೇ ಇದೆ. ಕೃಷಿ ವಿಶ್ವವಿದ್ಯಾಲಯದವರು ಸಲಹೆ ಕೊಡುವವರೆಗೂ ಕಾಯಬೇಕಾಗಿಲ್ಲ. ಕೊಡಗಿನವರಿಗೂ ಬೇರೆ ಜಿಲ್ಲೆಗಳಿಗೆ ಸಿಗುವಂತಹ ಸೌಲಭ್ಯ ಸಿಗುವಂತಾಗಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಬಡವರು ಶ್ರೀಮಂತರು ಎನ್ನುವ ಪ್ರಶ್ನೆಯಿಲ್ಲ. ತುಂಡು ಭೂಮಿ ನಿರೋಧ ಮತ್ತು ಕ್ರೋಡೀಕರಣ ಕಾಯ್ದೆ ಏನಿದೆ ಅದೊಂದು ನೀತಿ ಆಧಾರದ ಮೇಲೆ ಆಗಿದೆ. ಆ ಕಾನೂನು ಚಿಕ್ಕ ಚಿಕ್ಕ ಹಿಡುವಳಿದಾರರು. ವ್ಯವಸಾಯಗಾರರಿಗೆ ಅನುಕೂಲ ಮಾಡಲಿಕ್ಕೆ ಜಾರಿಗೆ ಬಂದಿದೆ. ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಜಾರಿಗೆ ಬಂದಿದೆ. ಮುಂಬಯಿ ಕರ್ನಾಟಕ ದಲ್ಲೂ ಈ